# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 548(640) |
| ಸದಸ್ಯರ ಹೆಸರು | : | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.12.2023 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಆಯುಷ್ ಇಲಾಖೆಯಲ್ಲಿ ಸೇವಾ ಅವಧಿಯಲ್ಲಿ (in service) ಸ್ನಾತಕೋತ್ತರ ಪದವಿ ಪಡೆದಿರುವ ಸಂಖ್ಯೆ ಎಷ್ಟು ಮತ್ತು ಸೇವಾ ವಿವರ ನೀಡುವುದು; ಹಾಗೂ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದ ಮಾಹಿತಿ ನೀಡುವುದು; | ಆಯುಷ್ ಇಲಾಖೆಯಲ್ಲಿ ಸೇವಾ ಅವಧಿಯಲ್ಲಿ (in service) ಸ್ನಾತಕೋತ್ತರ ಪದವಿ ಪಡೆದಿರುವ ಸಂಖ್ಯೆ :159<br><br>ಇವರುಗಳ ಸೇವಾ ವಿವರ ಮತ್ತು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದ ಮಾಹಿತಿಯ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಆಯುಷ್ ಇಲಾಖೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಸರ್ಕಾರಿ ವೈದ್ಯರ ಕರ್ತವ್ಯ ಮತ್ತು ಜವಾಬ್ದಾರಿಗಳು ಯಾವುವು; ಸರ್ಕಾರವು ಇವರಿಗೆ ನೀಡುತ್ತಿರುವ ಸ್ನಾತಕೋತ್ತರ ಭತ್ಯೆ ಎಷ್ಟು; ಇವರು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ತಜ್ಞ ವೈದ್ಯಕೀಯ ಚಿಕಿತ್ಸೆಯ ಸೌಲಭ್ಯಗಳು ಇವೆಯೇ; ಸರಿಯಾಗಿ ಸಾರ್ವಜನಿಕರಿಗೆ ಈ ಸೌಲಭ್ಯಗಳು ತಲುಪುತ್ತಿವೆಯೇ; | ಆಯುಷ್ ಇಲಾಖೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯಾಧಿಕಾರಿಗಳು ತಮ್ಮ ಸಾಮಾನ್ಯ ಕರ್ತವ್ಯಗಳ ಜೊತೆಗೆ ತಮ್ಮ ತಜ್ಞತೆಯನುಸಾರ ಚಿಕಿತ್ಸೆಯನ್ನು ನೀಡುತ್ತಿರುತ್ತಾರೆ. ಈ ಸಂಬಂಧ ವಿಶೇಷವಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಇಲಾಖೆಯಿಂದ ನಿಗದಿಪಡಿಸಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ:ಆಕುಕ 358 ಪಿಐಎಂ 2016, ದಿನಾಂಕ:18-08-2016 ರನ್ವಯ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ವೈದ್ಯಾಧಿಕಾರಿಗಳಿಗೆ ಪ್ರತಿ ಮಾಹೆಯಾನ ಈ ಕೆಳಕಂಡಂತೆ ಭತ್ಯೆಗಳನ್ನು ನೀಡಲಾಗುತ್ತಿದೆ. |

| ಸೇವಾವಧಿ | ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರುವವರಿಗೆ |
|---|---|
| | ಮಾಸಿಕ ರೂ. |
| 0-6 ವರ್ಷ ಸೇವೆ ಸಲ್ಲಿಸಿದವರಿಗೆ | 42,600 |
| 6-13 ವರ್ಷ ಸೇವೆ ಸಲ್ಲಿಸಿದವರಿಗೆ | 43,700 |
| 13-20 ವರ್ಷ ಸೇವೆ ಸಲ್ಲಿಸಿದವರಿಗೆ | 44,800 |
| 20 ವರ್ಷಕ್ಕಿಂತ ಹೆಚ್ಚಿನ ಸೇವೆ ಸಲ್ಲಿಸಿದವರಿಗೆ | 44,800 |

ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ವೈದ್ಯಾಧಿಕಾರಿಗಳು ತಜ್ಞತೆಯನುಸಾರ ಚಿಕಿತ್ಸಾ ಸೌಲಭ್ಯಗಳನ್ನು ನೀಡಿ ಸಾರ್ವಜನಿಕರಿಗೆ ವೈದ್ಯಕೀಯ ಸೇವೆಯನ್ನು ನೀಡುತ್ತಿರುತ್ತಾರೆ.

Scanned with OKEN Scanner

| | | |
|---|---|---|
| (ಇ) | ಆಯುಷ್ ಇಲಾಖೆಗೆ ಉಪನಿರ್ದೇಶಕರ ಹುದ್ದೆಯ ಅವಶ್ಯಕತೆ ಇದೆಯೇ; ಇದ್ದಲ್ಲಿ, ಯಾವ ಮಾನದಂಡಗಳ ಆಧಾರದ ಮೇಲೆ ಉಪನಿರ್ದೇಶಕರ ಅಧಿಕಾರಿಗಳ ಹುದ್ದೆಗಳಿಗೆ ನೇಮಕ ಮಾಡಲಾಗುವುದು; ಹಾಗೂ ಅವರುಗಳ ಕರ್ತವ್ಯಗಳ ಮತ್ತು ಜವಾಬ್ದಾರಿಗಳ ಸಂಪೂರ್ಣ ವಿವರ ನೀಡುವುದು; | ಆಯುಷ್ ಇಲಾಖೆಗೆ ಉಪನಿರ್ದೇಶಕರ ಹುದ್ದೆಯ ಅವಶ್ಯಕತೆ ಇರುತ್ತದೆ. ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಉಪನಿರ್ದೇಶಕರ ಹುದ್ದೆಗೆ ನೇಮಕ ಮಾಡಲಾಗುವುದು.<br><br>**ಉಪನಿರ್ದೇಶಕರು (ಆಯು/ಯು/ಹೋ/ಪ್ರ.ಚಿ.&ಯೋ) ಇವರುಗಳ ಕರ್ತವ್ಯ ಮತ್ತು ಜವಾಬ್ದಾರಿಗಳು ಈ ಕೆಳಕಂಡಂತಿದೆ:**<br><br>1. ಈಗಾಗಲೇ ಹಂಚಿಕೆ ಮಾಡಿರುವಂತೆ ಸಂಬಂಧಪಟ್ಟ ವಿಭಾಗಗಳ ಆಯುಷ್ ಆಸ್ಪತ್ರೆಗಳು/ ಚಿಕಿತ್ಸಾಲಯಗಳ ಪರಿಶೀಲನೆ, ನಿಯಂತ್ರಣ ಮತ್ತು ಮೇಲುಸ್ತುವಾರಿ.<br>2. ಹಂಚಿಕೆಯಾಗಿರುವ ಆಯಾ ವಿಭಾಗಗಳಲ್ಲಿ ಅನುಷ್ಠಾನಗೊಳಿಸುವ ಎಲ್ಲಾ ಆಯುಷ್ ಕಾರ್ಯಕ್ರಮಗಳು, ಯೋಜನೆಗಳು / ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಕಾರ್ಯಕ್ರಮಗಳ ಮೇಲುಸ್ತುವಾರಿಯೊಂದಿಗೆ ಪ್ರಗತಿ ಪರಿಶೀಲನೆ ಮಾಡಿ ಮುಖ್ಯ ಆಡಳಿತಾಧಿಕಾರಿಗಳೊಂದಿಗೆ ಸಮನ್ವಯಗೊಳಿಸುವುದು.<br>3. ಆಯಾ ಪದ್ಧತಿಗಳ ರೋಗಗಳ ವಿಶೇಷ ಚಿಕಿತ್ಸೆ ಮತ್ತು ಸಂಶೋಧನೆಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ರೂಪಿಸುವುದು.<br>4. ಆಯಾ ಪದ್ಧತಿಗಳ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಲೋಕಸಭೆ/ ರಾಜ್ಯಸಭೆ/ ವಿಧಾನಸಭೆ/ ವಿಧಾನ ಪರಿಷತ್‌ಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸೂಕ್ತ ಮಾಹಿತಿ ನೀಡುವುದರೊಂದಿಗೆ ಮೇಲುಸ್ತುವಾರಿ ವಹಿಸುವುದು.<br>5. ಆಯಾ ಪದ್ಧತಿಯಡಿಯಲ್ಲಿ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳನ್ನು ಪರಿಶೀಲಿಸಿ ನಿಯಮಾನುಸಾರ ಮರುಪಾವತಿ ಅರ್ಹತೆ ಇರುವ ಬಗ್ಗೆ ಆಯುಕ್ತರಿಗೆ ಶಿಫಾರಸ್ಸು ಮಾಡುವುದು.<br>6. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ ಅಡಿಯಲ್ಲಿ ಟೆಂಡರ್ ಕರೆಯುವ ಅಂಗೀಕಾರ ಸಮಿತಿಯಲ್ಲಿ ಹಾಗೂ ತಾಂತ್ರಿಕ ಸಮಿತಿಯಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸುವುದು.<br>7. ಆಯಾಯ ವಿಭಾಗದ ಜಿಲ್ಲೆಗಳಲ್ಲಿ ಆಸ್ಪತ್ರೆ/ ಚಿಕಿತ್ಸಾಲಯಗಳ ತಪಾಸಣೆ ಮತ್ತು ಅಲ್ಲಿ ಕಂಡುಬರುವ ಕುಂದುಕೊರತೆ, ಔಷಧಿಗಳ ಬೇಡಿಕೆ ಪಟ್ಟಿ ಸಿದ್ಧಪಡಿಸುವುದು, ಔಷಧಗಳ ಪೂರೈಕೆ/ ದಾಸ್ತಾನು ನಿಯಂತ್ರಣ, ವೈದ್ಯರ ಕೊರತೆ, |

Scanned with OKEN Scanner

| | | |
|---|---|---|
| | | ಮೇಲುಸ್ತುವಾರಿ ಮಾಡುವುದು.<br>17.ಸಂಬಂಧಪಟ್ಟ ಪದ್ಧತಿಯ ವೈದ್ಯರು ಮತ್ತು ಸಿಬ್ಬಂದಿ ಕರ್ತವ್ಯದ ನಿರ್ವಹಣೆಯ ಕುರಿತು ಬರುವ ದೂರುಗಳ ಕಡತ ಪರಿಶೀಲಿಸುವುದು ಮತ್ತು ಅಭಿಪ್ರಾಯ ನೀಡುವುದು.<br>18.ಸಂಬಂಧಪಟ್ಟ ಪದ್ಧತಿಯ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಇಲಾಖಾ ಮುಖ್ಯಸ್ಥರ ಪೂರ್ವಾನುಮತಿ ಪಡೆದು ಭೇಟಿ ನೀಡಿ ತಪಾಸಣೆ ಮಾಡಿ ವರದಿ ನೀಡುವುದು.<br>19.ಆಯಾ ಪದ್ಧತಿಗಳಲ್ಲಿ ಆಸ್ಪತ್ರೆ, ಚಿಕಿತ್ಸಾಲಯಗಳನ್ನು ಹೊಸದಾಗಿ ತೆರೆಯುವ ಪ್ರಸ್ತಾವನೆಗಳ ಪರಿಶೀಲನೆ, ತಾಂತ್ರಿಕ ಅಭಿಪ್ರಾಯ ಮತ್ತು ತೀರ್ಮಾನ.<br>20.ಅಂದಾಜು ಸಮಿತಿ, ಅರ್ಜಿ ಸಮಿತಿ, ಭರವಸೆ ಸಮಿತಿ ಇತ್ಯಾದಿಗಳ ಕಡತ ಪರಿಶೀಲನೆ, ಮಾಹಿತಿ ಸಂಗ್ರಹ, ವರದಿ ಸಲ್ಲಿಕೆ, ಸಮಿತಿ ಸಭೆಗಳಿಗೆ ಹಾಜರಾಗಿ ಸಮಿತಿ ಬಯಸುವ ಮಾಹಿತಿ ಒದಗಿಸುವುದು.<br>21.ಮೇಲಾಧಿಕಾರಿಗಳು ಸೂಚಿಸುವ ಇನ್ನಿತರ ಎಲ್ಲಾ ಕಾರ್ಯಗಳು. |
| (ಈ) | ಜಿಲ್ಲಾ ಆಯುಷ್ ಅಧಿಕಾರಿಗಳ ಅವಶ್ಯಕತೆ ಇದೆಯೇ; ಹಾಗಿದ್ದಲ್ಲಿ, ಯಾವ ಯಾವ ಕಾರಣಕ್ಕಾಗಿ ಮತ್ತು ಇವರುಗಳ ಕರ್ತವ್ಯಗಳು ಯಾವುವು; | ಆಯುಷ್ ಇಲಾಖೆಯಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳ ಅವಶ್ಯಕತೆ ಇರುತ್ತದೆ.<br><br>ಜಿಲ್ಲಾ ಆಯುಷ್ ಅಧಿಕಾರಿ ವೃಂದದ ಹುದ್ದೆಗಳು ಗ್ರೂಪ್ 'ಎ' ಹಿರಿಯ ಶ್ರೇಣಿಯ ಆಡಳಿತಾತ್ಮಕ ಹುದ್ದೆಗಳಾಗಿದ್ದು, ಸಂಬಂಧಪಟ್ಟ ಜಿಲ್ಲೆಯಲ್ಲಿರುವ ಆಯುಷ್ ಸಂಸ್ಥೆಗಳು ಈ ಅಧಿಕಾರಿಗಳ ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆ. ಈ ಅಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ/ಚಿಕಿತ್ಸಾಲಯಗಳ ಸಂಪೂರ್ಣ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ ಹಾಗೂ ಸದರಿ ಜಿಲ್ಲಾ ಆಯುಷ್ ಅಧಿಕಾರಿಗಳುಕೆ.ಪಿ.ಎಂ.ಇ. ಹಾಗೂ ಕೆ.ಎ.ಯು.ಪಿ. ಮಂಡಳಿಯ ಅಧಿನಿಯಮ ಮತ್ತು ನಿಯಮಗಳನ್ನು ಅನುಷ್ಠಾನಗೊಳಿಸುವ ಕಾರ್ಯವು ಕೂಡ ಈ ಅಧಿಕಾರಿಗಳ ವ್ಯಾಪ್ತಿಗೆ ಒಳಪಟ್ಟಿರುತ್ತದೆ.ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಖಾಸಗಿ ಚಿಕಿತ್ಸಾಲಯಗಳ ನಿಯಂತ್ರಣವನ್ನು ಕೂಡ ಹೊಂದಿರುತ್ತಾರೆ.ಸದರಿ ಅಧಿಕಾರಿಗಳು ಇಲಾಖೆಯಿಂದ, ಜಿಲ್ಲಾ ಪಂಚಾಯತ್ ನಿಂದ, ಸರ್ಕಾರದಿಂದ ಹಾಗೂ ಬೇರೆ ಬೇರೆ ಇಲಾಖೆಗಳಿಂದ ತಮ್ಮ ತಮ್ಮ ಜಿಲ್ಲೆಗಳಿಗೆ |

Scanned with OKEN Scanner

| | | |
|---|---|---|
| | | ವೈದ್ಯರು ಹಾಗೂ ಸಿಬ್ಬಂದಿಯ ಕಾರ್ಯನಿರ್ವಹಣೆ ಇತ್ಯಾದಿಗಳ ಬಗ್ಗೆ ಪರಿಶೀಲನೆ ಮತ್ತು ವರದಿ.<br>8. ಸರ್ಕಾರಿ ಕೇಂದ್ರೀಯ ಔಷಧಾಗಾರದಲ್ಲಿ ಉತ್ಪನ್ನವಾಗುವ ಔಷಧಗಳ ಗುಣಮಟ್ಟ, ವೈಜ್ಞಾನಿಕವಾಗಿ pharmocopia ಪ್ರಕಾರ ಔಷಧಗಳ ತಯಾರಿಕೆ ಹಾಗೂ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಸದಸ್ಯರಾಗಿ ಹಾಜರಾಗಿ ಸಲಹೆಗಳನ್ನು ನೀಡುವುದು, ಉಪನಿರ್ದೇಶಕರು (ಆ) ಮತ್ತು (ಯು).<br>9. ಆಯಾ ಪದ್ಧತಿಗಳಲ್ಲಿ ತಾಂತ್ರಿಕ ಸಲಹೆಗಳೊಂದಿಗೆ ಸಾರ್ವಜನಿಕರಿಗೆ ಉಪಯೋಗವಾಗುವಂತಹ ಮತ್ತು ಆಡಳಿತವನ್ನು ಉತ್ತಮಪಡಿಸುವಂತಹ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು.<br>10. ತಮ್ಮ ವಿಭಾಗಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಹಂತದಲ್ಲಿ / ವಿಭಾಗೀಯ ಮಟ್ಟದಲ್ಲಿ ನಡೆಯುವ ಸಭೆಗಳಿಗೆ ಅಗತ್ಯತೆ ಆಧಾರದ ಮೇಲೆ ಭಾಗವಹಿಸುವುದು ಮತ್ತು ಪೂರಕ ಮಾಹಿತಿಗಳನ್ನು ತಮ್ಮ ವಿಭಾಗಕ್ಕೆ ಸಂಬಂಧಪಟ್ಟಂತೆ ಒದಗಿಸುವುದು.<br>11. ತಮ್ಮ ಪದ್ಧತಿಗಳಿಗೆ ಸಂಬಂಧಿಸಿದಂತೆ ಎಲ್ಲಾ ರೀತಿಯ ತಾಂತ್ರಿಕ ಸಲಹೆ/ ಅಭಿಪ್ರಾಯಗಳನ್ನು ಆಯುಕ್ತರಿಗೆ ನೀಡುವುದು.<br>12. ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು, ರಾಷ್ಟ್ರೀಯ ಆಯುಷ್ ಅಭಿಯಾನದಡಿ ಆಯೋಜಿಸುವ ಕಾರ್ಯಕ್ರಮಗಳ ಮೇಲುಸ್ತುವಾರಿ.<br>13. ಆಯಾ ಪದ್ಧತಿಗಳ ಚಿಕಿತ್ಸಾ ಪ್ರಯೋಜನಗಳ ಬಗ್ಗೆ ಜನಗಳಲ್ಲಿ ಜಾಗೃತಿ, ಮೂಡಿಸುವ ಶಿಬಿರಗಳನ್ನು ಆಯೋಜಿಸುವ ಬಗ್ಗೆ ಜಿಲ್ಲಾ ಆಯುಷ್ ಅಧಿಕಾರಿಗಳೊಡನೆ ಸಮನ್ವಯ.<br>14. ಭಾರತ ಸರ್ಕಾರ / ಇತರೆ ರಾಜ್ಯ ಸರ್ಕಾರಗಳು ನಡೆಸುವ ವಸ್ತು ಪ್ರದರ್ಶನ/ ಕಾರ್ಯಗಾರಗಳಲ್ಲಿ ಭಾಗವಹಿಸುವ ಬಗ್ಗೆ ಸಮನ್ವಯ ಮತ್ತು ಮೇಲ್ವಿಚಾರಣೆ.<br>15. ಆಯಾ ವಿಭಾಗಕ್ಕೆ ಸಂಬಂಧಿಸಿದ ವೈದ್ಯಾಧಿಕಾರಿಗಳ ಕಾರ್ಯ ನಿರ್ವಹಣಾ ವರದಿ ಪುನರಾವಲೋಕನ.<br>16. ಸಂಬಂಧಪಟ್ಟ ಪದ್ಧತಿಯ ಆಸ್ಪತ್ರೆಗಳಲ್ಲಿ ಹೊರರೋಗಿ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದ ರೋಗಿಗಳ ಪ್ರತಿ ಮಾಹೆಯ ಅಂಕಿಅಂಶ |

Scanned with OKEN Scanner

| | | |
|---|---|---|
| | | ಸಂಬಂಧಪಟ್ಟ ಮಾಹಿತಿಯನ್ನು ಕಾಲಕಾಲಕ್ಕೆ ಸಮರ್ಪಕವಾಗಿ ನೀಡಬೇಕಾಗಿರುತ್ತದೆ ಹಾಗೂ ಈ ಇಲಾಖೆಯಲ್ಲಿ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ರೂಪಿಸಿ ಅನುಷ್ಠಾನಗೊಳಿಸಿರುವ ಎಲ್ಲಾ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸುವ ಸಂಪೂರ್ಣ ಜವಾಬ್ದಾರಿಯನ್ನು ಹಾಗೂ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. |
| (ಉ) | ಜಿಲ್ಲಾ ಆಯುಷ್ ಇಲಾಖೆಯಲ್ಲಿ ಯಾವ ಮಾನದಂಡಗಳ ಆಧಾರದ ಮೇಲೆ ಜಿಲ್ಲಾ ಆಯುಷ್ ಅಧಿಕಾರಿಗಳ ಹುದ್ದೆಗಳಿಗೆ ನೇಮಕ ಮಾಡಲಾಗುವುದು; (ಸಂಪೂರ್ಣ ವಿವರ ನೀಡುವುದು) | ಆಯುಷ್ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲಾ ಆಯುಷ್ ಅಧಿಕಾರಿಗಳ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ : ಆಕುಕ 154 ಪಿಐಎಂ 2013, ದಿನಾಂಕ:17-01-2014 ರಲ್ಲಿ ಈ ಕೆಳಕಂಡ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಆದೇಶಿಸಿದೆ (ಪ್ರತಿ ಲಗತ್ತಿಸಿದೆ).<br>1. ಆಯುಷ್ ವೈದ್ಯರಾಗಿ, ನಿಯತಕಾಲಿಕವಾಗಿ (Regular) ನೇಮಕಗೊಂಡು ವೈದ್ಯಾಧಿಕಾರಿ ಹಾಗೂ ಹಿರಿಯ ವೈದ್ಯಾಧಿಕಾರಿ ಹುದ್ದೆಗಳಲ್ಲಿ ಕನಿಷ್ಠ 15 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರಬೇಕು.<br>2. ಮೂರು ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ಕನಿಷ್ಠ "ಉತ್ತಮ" ಶ್ರೇಣಿಯನ್ನು (Very good) ಹೊಂದಿರಬೇಕು.<br>3. ಅಧಿಕಾರಿಯ ಮೇಲೆ ಯಾವುದೇ ಇಲಾಖಾ/ಕ್ರಿಮಿನಲ್ ವಿಚಾರಣೆ ಇರಕೂಡದು.<br>4. ಅಧಿಕಾರಿಯು ಸ್ನಾತಕೋತ್ತರ ಪದವಿ ಹೊಂದಿರುವುದು ಅಪೇಕ್ಷಣೀಯ.<br>5. ಅಧಿಕಾರಿಯು ಒಂದು ತಿಂಗಳ ಅಥವಾ ಅಧಿಕ ಅವಧಿಯ ಆಡಳಿತಾತ್ಮಕ ತರಬೇತಿ ಹೊಂದಿರುವುದು ಅಪೇಕ್ಷಣೀಯ.<br>6. ಅಧಿಕಾರಿಯು ವೃತ್ತಿಪರ ಅಭಿವೃದ್ಧಿ ಕೋರ್ಸ್‌ನಲ್ಲಿ ತರಬೇತಿ ಹೊಂದಿರುವುದು ಅಪೇಕ್ಷಣೀಯ.<br>7. ಆಯುಷ್ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ವೈದ್ಯರುಗಳು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಜವಾಬ್ದಾರಿಯಿಂದ ಸಕ್ರಿಯವಾಗಿ ಭಾಗವಹಿಸಿರಬೇಕು. ಈ ಆಸ್ಪತ್ರೆಗಳಲ್ಲಿ |

Scanned with OKEN Scanner

| | | |
|---|---|---|
| | | ಆರೋಗ್ಯ ಮೇಳ/ಪುನರ್‌ಮನನ ತರಬೇತಿಗಳಲ್ಲಿ ಭಾಗವಹಿಸಿರಬೇಕು. ಇವರುಗಳಿಗೆ ಹಂಚಿಕೆ ಮಾಡಿರುವ ಒಳರೋಗಿಗಳ ಹಾಸಿಗೆಗಳನ್ನು ಕನಿಷ್ಠ ಶೇ. 80 ರಷ್ಟು ತುಂಬಿರಬೇಕು.<br>8. ಅಧಿಕಾರಿಯು ಸಾರ್ವಜನಿಕ ಆರೋಗ್ಯ/ಆಸ್ಪತ್ರೆ ನಿರ್ವಹಣೆ ಬಗ್ಗೆ ತರಬೇತಿ ಆಕ್ಷೇಪಣೀಯ.<br>9. ಹಾಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಆಯುಷ್ ಅಧಿಕಾರಿಗಳನ್ನು ಮುಂದುವರಿಸಲು ಆಯುಷ್ ಇಲಾಖೆಯ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ಕನಿಷ್ಠ ಶೇ.80ರಷ್ಟು ಪ್ರಗತಿ ಸಾಧಿಸಿರಬೇಕು. |

**ಸಂಖ್ಯೆ: ಆಕುಕ 179 ಪಿಟಿಡಿ 2023/ಇ.ಆ**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner